**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 673/2017**
**ಚಾಸಾ :- 01 / ಪ್ರಾಸಾ :- 02**

| | |
|---|---|
| ಹೆಸರು | **ಹನುಮಂತರಾಯಪ್ಪ** |
| ತಂದೆಯ ಹೆಸರು | **ಗಾಳಿವೆಂಕಟಯ್ಯ** |
| ವಯಸ್ಸು | **53** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಜಟ್ಟಿಪಾಳ್ಯ** |

**ದಿನಾಂಕ: 19-05-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿನಾಂಕ 09-10-2016 ರಂದು ನಾನು ನಮ್ಮ ಊರಿನಲ್ಲಿ ಇದ್ದಾಗ, ನನ್ನ ಸ್ನೇಹಿತನಾದ ಚಾಸಾ-5 ರವರು ಕರೆ ಮಾಡಿ ನನ್ನ ಮಗನಾದ ರವಿಕುಮಾರ್ ರವರಿಗೆ ಅಪಘಾತ ವಾಗಿದೆ ಎಂದು ತಿಳಿಸಿದರು. ನಾನು ತಕ್ಷಣ ಅಪಘಾತ ನಡೆದ ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ಮಗನಾದ ರವಿಕುಮಾರ್ ರವರು ಮೃತಪಟ್ಟಿರುತ್ತಾರೆ. ನನ್ನ ಮಗನು ಪಲ್ಸರ್ ಮೋಟರ್ ಸೈಕಲ್ ಸಂಖ್ಯೆ ಕೆಎ-41-ಇಇ-4638 ತಾವರೆಕೆರೆ ಯಿಂದ ಬೆಂಗಳೂರಿನ ಸುಂಕದಕಟ್ಟೆ ಯಿಂದ ಸ್ನೇಹಿತನಾದ ಸಂತೋಷನನ್ನು ಕರೆದುಕೊಂಡು ಬರುವ ಸಮಯದಲ್ಲಿ ಲಕ್ಕುಪ್ಪೆ ಪೆಟ್ರೋಲ್ ಬಂಕ್ ನ ಬಳಿ ಮಾಗಡಿ ಬೆಂಗಳೂರು ಕಡೆಗೆ ಹೋಗುತ್ತಿದ್ದ ಇಂಡಿಕಾ ಕಾರ್ ಸಂಖ್ಯೆ ಕೆಎ-53-ಬಿ-2774 ವಾಹನವು ಅತಿವೇಗ ವಾಗಿ ಬಂದು ನನ್ನ ಮಗನು ಚಲಾಯಿಸುತ್ತಿದ್ದ ವಾಹನಕ್ಕೆ ಮುಖ ಮುಖಿಯಾಗಿ ಡಿಕ್ಕಿ ಹೊಡೆಯಿತು. ಸದರಿ ಅಪಘಾತದಿಂನದ ನನ್ನ ಮಗನ ತಲೆ, ಮೈ ಕೈ ಗೆ ಏಟಾಗಿತ್ತು ಮತ್ತು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ನಾನು ನೀಡಿದ ದೂರಾಗಿದೆ. ಅದರಲ್ಲಿ ನನ್ನ ಸಹಿ ಇದೆ. ದೂರನ್ನು ನಿಪಿ-1 ಎಂದು ಮತ್ತು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಪಂಚನಾಮೆ ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ನಿಪಿ-2 ಎಂದು ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಾನು ನಿಪಿ-2 ಕ್ಕೆ ದಿನಾಂಕ:10-10-2016 ರಂದು 1.00 ಗಂಟೆಯ ಸಮಯದಲ್ಲಿ ಅಪಘಾತ ನಡೆದ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನನ್ನ ಜೊತೆ ನಿಪಿ-2 ಕ್ಕೆ ಚಾಸಾ-5 ಮತ್ತು 6 ರವರು ಸಹಿ ಮಾಡಿರುತ್ತಾರೆ. ಪಂಚನಾಮೆಮಾಡುವ ಸಮಯದಲ್ಲಿ ಪೋಲಿಸರು ಪಲ್ಸರ್ ವಾಹನ ಮತ್ತು ಇಂಡಿಕಾ ಕಾರನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಎರಡು ವಾಹನಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಟಾಟಾ ವಾಹನದ ಚಾಲಕರು ಅಜಾಗರೂಕತೆಯಾಗಿ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ನನ್ನ ಮಗನು ಹೋಡಿಸುತ್ತಿದ್ದ ಗಾಡಿಗೆ ಡಿಕ್ಕಿ ಪಡಿಸಿದರು ಎಂದರೆ ಸರಿ. ನಿಪಿ-2 ರಂತೆ ಪೋಲೀಸರು ಪಂಚನಾಮೆಯನ್ನು ಬೆಳಗ್ಗೆ 8.00 ರಿಂದ 8.40 ರ ಸಮಯದಲ್ಲಿ ಮಾಡಿಕೊಂಡರು ಎಂದರೆ ಸರಿ.

**ಪಾಟೀ ಸವಾಲು ಃ- ಆರೋಪಿ ಪರ ಶ್ರೀ. ಎನ್ ಆರ್ ,** ವಕೀಲರಿಂದ ಃ-

ಆರೋಪಿ ಪರ ವಕೀಲರು ಪಾಟೀಸವಾಲು ಮಾಡಲು ಸಮಯವನ್ನು ಕೋರಿರುತ್ತಾರೆ. ಅದನ್ನು ನಿರಾಕರಿಸಲಾಯಿತು. ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**